ಸಿಸಿ ನಂಃ 4102/2023

ಸಿ.ಡಬ್ಲೂ – 4

ಪಿ.ಡಬ್ಲೂ –8

**4 ನೇ ಹಿರಿಯ ದಿವಾಣಿ ನ್ಯಾಯಾಧೀಶರು ಮತ್ತು ಜೆಎಂಎಫ್‌ಸಿ ರವರ ನ್ಯಾಯಾಲಯ**

**ಧಾರವಾಡ.**

| | | |
|---|---|---|
| ಸಾಕ್ಷಿದಾರರ ಹೆಸರು | : | ರವಿ |
| ತಂದೆಯ ಹೆಸರು | : | ಯಲ್ಲಪ್ಪಾ |
| ವಯಸ್ಸು | : | 35 ವರ್ಷ |
| ಉದ್ಯೋಗ | : | ಕೂಲಿ ಕೆಲಸ |
| ವಾಸ ಸ್ಥಳ | : | ನಾಯಕನ ಹುಲಿಕಟ್ಟಿ . |

ಸತ್ಯ ಪ್ರತಿಜ್ಞೆ ಮಾಡಿಸಲಾಯಿತು :03-02-2026

**ಮುಖ್ಯ ವಿಚಾರಣೆ : ಮಾನ್ಯ ಹಿಸಸಅ ರವರಿಂದ**

ಚಾಸಾ–5 ನನಗೆ ಗೊತ್ತು. ಸಾಕ್ಷಿಯು ನಿಪಿ–2 ರಲ್ಲಿರುವ ಸಹಿಯನ್ನು ನೋಡಿ ಗುರುತಿಸಿದ್ದು ಅದನ್ನು ನಿಪಿ– 2 (ಬಿ ) ಎಂದು ಗುರುತಿಸಲಾಯಿತು. ಸಾಕ್ಷಿಯು ನಿಪಿ.3 ನ್ನು ನೋಡಿ ಗುರುತಿಸಿದ್ದಾರೆ. 24–09–2022 ರಂದು ನಾನು ಎರಿಕೊಪ್ಪದಿಂದ ಹುಬ್ಬಳ್ಳಿಗೆ ಹೋಗುತ್ತಿದ್ದಾಗ ಪೋಲಿಸರು ಸಾಕ್ಷಿಗೆ ಸಹಿ ಮಾಡು ಎಂದರು, ಆದ್ದರಿಂದ ನಾನು ಸಹಿ ಮಾಡಿರುತ್ತೇನೆ. ಪೋಲಿಸರು ರೇಶನ ಅಕ್ಕಿ ಹಿಡಿದಿದ್ದೆವೆ ಎಂದು ಹೇಳಿರುತ್ತಾರೆ. ಅದನ್ನು ಯಾರ ಕಡೆಯಿಂದ ಹಿಡಿದಿದ್ದಾರೆ ನನಗೆ ಹೇಳಿಲ್ಲ. ನಿಪಿ.2 ರಲ್ಲಿ ಏನು ಬರೆದಿದ್ದಾರೆ ನನಗೆ ಗೊತ್ತಿಲ್ಲ.

ಸಿಸಿ ನಂಃ 4102/2023

ಸಿ.ಡಬ್ಲೂ – 4

ಪಿ.ಡಬ್ಲೂ –8

**(ಮಾನ್ಯ ಹಿಸಸಅರವರು ಸಾಕ್ಷಿಯನ್ನು ಅಭಿಯೋಜನೆಗೆ ಭಾಗಶಃ ಪ್ರತಿಕೂಲ ಸಾಕ್ಷಿ ಎಂದು ಪರಿಗಣಿಸಿ ಪಾಟೀಸವಾಲು ಮಾಡಲು ಅನುಮತಿ ಕೋರಿದ್ದು ಅನುಮತಿ ನೀಡಿದೆ)**

**ಪಾಟೀಸವಾಲುಃ ಮಾನ್ಯ ಹಿಸಸಅವರಿಂದ**

ಆ ದಿನ ಆರೋಪಿ ಪಡಿತರ ಅಕ್ಕಿಯನ್ನು ಅಕ್ರಮವಾಗಿ ಸಂಗ್ರಹ ಇಟ್ಟಿದ್ದಾರೆ ಮತ್ತು ಅಲ್ಲಿ ಪಂಚನಾಮೆ ಮಾಡಲು ನನ್ನನ್ನು ಕರೆದುಕೊಂಡು ಹೋಗಿದ್ದಾರೆ ಎಂದರೆ ಸರಿ. ಸಾಕ್ಷಿಯು ಮುಂದುವರೆದು ಸದರಿ ಜಾಗವನ್ನು ಯಾರು ತೋರಿಸಿದರು ನನಗೆ ಗೊತ್ತಿಲ್ಲ. ಎಂದು ಹೇಳುತ್ತಾರೆ. ಆ ದಿನ ಆರೋಪಿತರ ಬಳಿಯಿಂದ ಪಡಿತರ ಅಕ್ಕಿಯನ್ನು ಜಪ್ತು ಮಾಡಿ ತೂಕ ಮಾಡಿದರು ಎಂದರೆ ಸರಿ. ಆರೋಪಿತರನ್ನು ನಾನು ಆ ದಿನ ನೋಡಿದ್ದೆನೆ ಎಂದರೆ ಸರಿಯಲ್ಲ.

**ಪಾಟೀಸವಾಲುಃ ಆರೋಪಿ ಪರ ವಕೀಲರಿಂದ**

ಪಂಚನಾಮೆಗೆ ಪೋಲಿಸರು ನೋಟಿಸ್ಸ ಕೊಟ್ಟು ಕರೆಸಿಲ್ಲ ಎಂದರೆ ಸರಿ. ನಿಪಿ.2 ಕ್ಕೆ ಖಾಲಿ ಕಾಗದದ ಮೇಲೆ ಸಹಿ ಪಡೆದಿದ್ದಾರೆ ಎಂದರೆ ಸರಿ. ನಿಪಿ.3 ದನದ ಶೆಡ್ಡು ಎಂದರೆ ಸರಿಯಲ್ಲ. ಸದರಿ ಸ್ಥಳದಲ್ಲಿ ಪೋಟೋ ತೆಗೆದು ನಮ್ಮ ಸಹಿ ಪಡೆದು ಕಳುಹಿಸಿದ್ದಾರೆ ಎಂದರೆ ಸರಿ. ಆ ದಿನ ಅಕ್ಕಿಯನ್ನು ಹಿಡಿದಿದ್ದರು ಎಂದು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ.

ಸಿಸಿ ನಂಃ 4102/2023
ಸಿ.ಡಬ್ಲೂ – 4
ಪಿ.ಡಬ್ಲೂ –8

ನಿಪಿ.3 ರಲ್ಲಿ ಇರುವ ವ್ಯಕ್ತಿಗಳ ಹೆಸರು ನನಗೆ ಗೊತ್ತಿಲ್ಲ ಎಂದರೆ ಸರಿ. ಆ ದಿನ ಯಾರು ಎಷ್ಟು ತೂಕ ಮಾಡಿದ್ದಾರೆ ನನಗೆ ಗೊತ್ತಿಲ್ಲ ಎಂದರೆ ಸರಿ. ನಿಪಿ.3 ರಲ್ಲಿರುವ ಸ್ಥಳದಲ್ಲಿ ಯಾವುದೇ ಅಕ್ಕಿ ಜಪ್ತು ಪಡಿಸಿಲ್ಲ ಎಂದರೆ ಸರಿ. ಅಲ್ಲಿ ಖಾಲಿ ಇತ್ತು ಎಂದು ಹೇಳುತ್ತಾರೆ. ನಾನು ಪೋಲಿಸರು ಮಾತು ಕೇಳಿ ಸುಳ್ಳು ಸಾಕ್ಷಿ ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ.

**ಮರುವಿಚಾರಣೆ ಇಲ್ಲ.**

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಬೆರಳಚ್ಚು ಮಾಡಲಾಯಿತು)

ಓ ಹೇ ಕೇ ಸರಿ ಅದೆ,

**( ಆನಂದ ಎಸ್ ಕರಿಯಮ್ಮನವರ್)**
4 ನೇ ಹಿ ದಿ ನ್ಯಾ ಹಾಗೂ ಜೆಎಂಎಫ್‌ಸಿ,
ಧಾರವಾಡ.